<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.</u>

<u>ಸಿ.ಸಿ.ಸಂಖ್ಯೆ2292/2022</u>

ಫಿರ್ಯಾದುದಾರರುಃ- ಸರ್ಕಾರದ ಪರವಾಗಿ ಕಡೂರು ಪೊಲೀಸರು

ವಿರುದ್ಧ

ಆರೋಪಿತರುಃ- ಮೋಹನಕುಮಾರ ಮತ್ತು ಇತರರು

**<u>ದೋಷಾರೋಪಣೆ</u>**

ಶ್ರೀ ಎಂ.ಎನ್.ರಾಮ್ ಪ್ರಶಾಂತ್, ಬಿ.ಎ.ಎಲ್. ಎಲ್.ಎಲ್.ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ಮೋಹನಕುಮಾರ, ಬಿನ್ ಡಿ.ಸಿ.ಕುಮಾರಸ್ವಾಮಿ, ವಯಸ್ಸುಃ 25 ವರ್ಷ,
2. ಕೆ.ಅಭಿಷೇಕ್, ಬಿನ್ ಕುಮಾರ್ವಾಮಿ, 27 ವರ್ಷ,
3. ಕುಮಾರಸ್ವಾಮಿ, ಬಿನ್ ಲೇಟ್ ಚಂದ್ರಶೇಖರಯ್ಯ, 58 ವರ್ಷ,
4. ಶಾರದಮ್ಮ ಕೋಂ ಡಿ.ಸಿ.ಕುಮಾರಸ್ವಾಜಮಿ, 51 ವರ್ಷ, ಗೃಹಿಣಿ,

ಆರೋಪಿತರ ವಾಸ : ದೇವರಹಳ್ಳಿ ಗ್ರಾಮ, ಕಡೂರು ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆಃ

ದಿನಾಂಕ 08.2.202 ರಂದು ಬೆಳಿಗ್ಗೆ 10-30 ಗಂಟೆ ಸಮಯದಲ್ಲಿ, ಕಡೂರು ಪೊಲೀಸ್ ಠಾಣಾ ವ್ಯಾಪ್ತಿಯ ದೇವರಹಳ್ಳಿ ಗ್ರಾಮದ ಚಾಸಾ-2 ಮಲ್ಲಿಕಾರ್ಜುನಯ್ಯರವರು ತಮಗೆ ಸೇರಿದ ಸರ್ವೇ ನಂಬರ್ 45/ಪಿ3 ರ ಜಮೀನಿಗೆ ಹೋದಾಗ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಸದರಿ ಜಮೀನಿನಲ್ಲಿನ ರಾಗಿ ಬೆಳೆಯನ್ನು ಕೊಯ್ಯುತ್ತಿದ್ದು, ಚಾಸಾ-2 ರವರು ಚಾಸಾ-1 ಧನಂಜಯರವರಿಗೆ ದೂರವಾಣಿ ಮೂಲಕ ವಿಚಾರ ತಿಳಿಸಿ, ಜಮೀನಿನ ಹತ್ತಿರ ಬರಲು ತಿಳಿಸಿದಾಗ, ಚಾಸಾ-1 ರವರು ಚಾಸಾ-3 ಮಹೇಶ ಹಾಗೂ ಚಾಸಾ-4 ತಮ್ಮಯ್ಯಬೋವಿರವರೊಂದಿಗೆ ಜಮೀನಿನ ಹತ್ತಿರ ಹೋಗಿ ನೋಡಿದಾಗ, ಆರೋಪಿತರಾದ ನೀವು ಬೆಳೆ ಕೊಯ್ಯುತ್ತಿದ್ದುದ್ದನ್ನು ಕಂಡು ಚಾಸಾ-1 ರವರು ಆರೋಪಿತರಾದ ನಿಮ್ಮನ್ನು ತಡೆಯಲು ಹೋದಾಗ, 2 ನೇ ಆರೋಪಿಯಾದ ನೀವು ಕೋಲಿನಿಂದ ಚಾಸಾ-1 ರವರ ಎಡಭುಜಕ್ಕೆ ಹೊಡೆದಿದ್ದು, 1 ಆರೋಪಿಯಾದ ನೀವು ಕಬ್ಬಿಣದ ರಾಡಿನಿಂದ ಚಾಸಾ-1 ರವರ ಎಡಭುಜಕ್ಕೆ, ಬಲ ಕುಂಡಿಗೆ, ಬಲಗಾಲಿನ ಕೆಳಗೆ ಹೊಡೆದು ತೀವ್ರ ಸ್ವರೂಪದ ಗಾಯ ಉಂಟು ಮಾಡಿ, ಭಾರತೀಯ ದಂಡ ಸಂಹಿತೆ ಕಲಂ 326 ಸಹ ಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಮೀನಿನ ವಿಚಾರದಲ್ಲಿ ಜಗಳ ತೆಗೆದು 2 ನೇ ಆರೋಪಿಯಾದ ನೀವು ಕೋಲಿನಿಂದ ಚಾಸಾ-2 ರವರ ಭುಜಕ್ಕೆ ಹಾಗೂ ಕಲ್ಲಿನಿಂದ ಬಲಕಣ್ಣಿನ ಕೆಳಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಭಾರತೀಯ ದಂಡ ಸಂಹಿತೆ ಕಲಂ 324 ಸಹ ಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಮೀನಿನ ವಿಚಾರದಲ್ಲಿ ಜಗಳ ತೆಗೆದು, 1 ಮತ್ತು 2 ನೇ ಆರೋಪಿತರಾದ ನೀವು ಕೈಗಳಿಂದ ಚಾಸಾ-1 ರವರ ಎದೆಗೆ ಗುದ್ದಿ ಕೆಳಗೆ ಬೀಳಿಸಿ ಕಾಲಿನಿಂದ ತುಳಿದು ನೋವುಂಟು ಮಾಡಿ, ಭಾರತೀಯ ದಂಡ ಸಂಹಿತೆ ಕಲಂ 323 ಸಹ ಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ , ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು, 4 ನೇ ಆರೋಪಿಯಾದ ನೀವು ಸೂಳೆಮಕ್ಕಳಿಗೆ ಹೊಡೆಯಿರಿ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದು, ಭಾರತೀಯ ದಂಡ ಸಂಹಿತೆ ಕಲಂ 506 ಸಹ ಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉಃ 1 ರಿಂದ 4 ನೇ ಆರೋಪಿತರು ಃ ತಿಳಿಯಿತು.

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉಃ 1 ರಿಂದ 4 ನೇ ಆರೋಪಿತರು ಃ ನಾವು ಯಾವುದೇ ತಪ್ಪು ಮಾಡಿರುವುದಿಲ್ಲ.
ವಿಚಾರಣೆಯಾಗಬೇಕು.

**ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.**

ದಿನಾಂಕಃ 03 ನೇ ದಿವಸ ಅಕ್ಟೋಬರ್ ಮಾಹೆ 2023 ನೇ ಇಸವಿ.

ಸಹಿ-

(ಎಂ.ಎನ್.ರಾಮ್ ಪ್ರಶಾಂತ್),
ಪ್ರಧಾನ ಪ್ರದನ್ಯಾದಂ ಕಡೂರು.